Rotary

ರೋಟರಿ **ಐಸಿರಿ** ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President


Rtn. K. Palaksha
District Governor


# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 10

ದಿನಾಂಕ: 09.09.2025



Rtn. Anil Kumar
President


Rtn. Krishnappa
Secretary

## ಇಂಟರಾಕ್ಟ್ ಜಿಲ್ಲಾಧಿವೇಶನ "ಜ್ಞಾನಸಿರಿ"ಯನ್ನು ಅದ್ಭುತವಾಗಿಸಿದ ರೋಟರಿ ಐಸಿರಿ




ವಿಶೇಷ ವಿನ್ಯಾಸದ ಭವ್ಯ ವೇದಿಕೆ, ತುಂಬಿ ತುಳಿಕಿದ ಸಭಾಂಗಣ, ತುಳುನಾಡ ಮೂಲವಾದ್ಯ ನಾಗಸ್ವರದೊಂದಿಗೆ ವೈಭವ ಪೂರ್ವಕ ಉದ್ಘಾಟನೆ, ಉತ್ತಮ ಊಟೋಪಚಾರ, ಅತಿಥಿಗಳ ಮನ ಮುಟ್ಟುವ ಹಿತನುಡಿಗಳು, ಸಂಪನ್ಮೂಲ ವ್ಯಕ್ತಿಗಳ ಮಾಹಿತಿ ಕಾರ್ಯಾಗಾರ, ರಸ್ತೆ ಸುರಕ್ಷತೆ ಕುರಿತು ಬೀದಿ ನಾಟಕ, ಸಮಯಪಾಲನೆ, 900ರಷ್ಟು ವಿದ್ಯಾರ್ಥಿ ಗಳಿದ್ದರೂ ಎಲ್ಲೆಡೆ ಶಿಸ್ತುಪಾಲನೆ... ಇದೆಲ್ಲಾ ರೋಟರಿ ಐಸಿರಿ ಆತಿಥ್ಯ ವಹಿಸಿ, ಉಡುಪಿಯ ಎಂ.ಜಿ.ಎಂ. ಕಾಲೇಜಿನ ಮುದ್ದಣ್ಣ ಮಂಟಪದಲ್ಲಿ ಸೆಪ್ಟೆಂಬರ್ 7ರ ಭಾನುವಾರ ಆಯೋಜಿಸಿದ ಜಿಲ್ಲಾ ಇಂಟರಾಕ್ಟ್ ಅಧಿವೇಶನದ ಹೈಲೈಟ್ಸ್.

ಒಟ್ಟು ಒಂಭತ್ತು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸಭಾಂಗಣದ ಪ್ರವೇಶದ್ವಾರದಿಂದ ಸಾಂಪ್ರದಾಯಿಕ ಶಾಸ್ತ್ರೀಯ ಮಂಗಳವಾದ್ಯ ನಾಗಸ್ವರ ವಾದನದೊಂದಿಗೆ ವೇದಿಕೆಗೆ ತಂದ ದೀಪ ಜ್ಯೋತಿಯನ್ನು ಬಳಸಿ ರೋಟರಿ ಜಿಲ್ಲಾ ಗವರ್ನರ್ ರೊ. ಕೆ. ಪಾಲಾಕ್ಷ ಅವರು ಜಿಲ್ಲಾ ಇಂಟರಾಕ್ಟ್ ಅಧಿವೇಶವನ್ನು ಉದ್ಘಾಟಿಸಿದರು. ನಿಯೋಜಿತ ಗವರ್ನರ್ ರೊ. ಬಿ.ಎಂ. ಭಟ್, ಡಿಸ್ಟ್ರಿಕ್ಟ್ ಲರ್ನಿಂಗ್ ಫೇಸಿಲಿಟೇಟರ್ ರೊ. ಬಿ. ರಾಜಾರಾಮ್ ಭಟ್, ರೋಟರಿ ಜಿಲ್ಲಾ ಯುವಜನ ಸೇವಾ ನಿರ್ದೇಶಕರಾದ ರೊ. ಜ್ಞಾನವಸಂತ ಶೆಟ್ಟಿ, ಇಂಟರಾಕ್ಟ್ ಜಿಲ್ಲಾ ಸಭಾಪತಿ ರೊ. ಸುರೇಶ ಬೇಳೂರು, ಸಹಾಯಕ ಗವರ್ನರ್ (ವಲಯ 4) ರೊ. ಅಮಿತ್ ಅರವಿಂದ್, ಜಿಲ್ಲಾ ಇಂಟರಾಕ್ಟ್ ಪ್ರತಿನಿಧಿ ಕುಮಾರಿ ಅನುಪಮಾ ಶೆಟ್ಟಿ, ಇಂಟರಾಕ್ಟ್ ಜಿಲ್ಲಾ ಉಪಸಭಾಪತಿ ರೊ.ಮುಸ್ತಾಕ್ ಆಲೀಶಾ ಟಿ. ಎಮ್., ಜಿಲ್ಲಾಧಿವೇಶನದ ಸಭಾಪತಿ ರೊ. ಸಂದೀಪ್ ಕುಮಾರ್, ವಲಯ 4ರ ಇಂಟರಾಕ್ಟ್ ಕೋರ್ಡಿನೇಟರ್ ರೊ. ಜಗದೀಶ್ ಕಾಮತ್, ಸಭಾಧ್ಯಕ್ಷರಾದ ಐಸಿರಿ ಅಧ್ಯಕ್ಷ ರೊ. ಅನಿಲ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ, ಜಿಲ್ಲಾಧಿವೇಶನದ ಕಾರ್ಯದರ್ಶಿ ಸುಕೇಶ್ ಕುಂದರ್ ಮತ್ತು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.




"ಇಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ನೆರೆದಿರುವ ಇಂಟರಾಕ್ಟರ್ಸ್ ನವರನ್ನೆಲ್ಲಾ ನೋಡಿದಾಗ ನಮ್ಮ ಭಾವೀ ರೋಟರಿ ಅಧಿವೇಶನದಂತೆ ಭಾಸವಾಗುತ್ತಿದೆ"

ಉದ್ಘಾಟನಾ ಭಾಷಣದಲ್ಲಿ ರೊ. ಕೆ. ಪಾಲಾಕ್ಷ




"ಬಹಳಷ್ಟು ಶಾಲೆಗಳಲ್ಲಿ ಇಂಟರಾಕ್ಟ್ ಸ್ಥಾಪಿಸಿ, ಅವರ ನೂರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನನಗೆ, ಈ ವಿದ್ಯಾರ್ಥಿ ಸಮೂಹದವೆಂದರೆ ಅತೀವ ಪ್ರೀತಿ"

ದಿಕ್ಸೂಚಿ ಭಾಷಣದಲ್ಲಿ ರೊ. ಬಿ.ಎಂ. ಭಟ್




"ಅಂತಾರಾಷ್ಟ್ರೀಯ ಮಟ್ಟದಲ್ಲಿ ರೋಟರಿ ಸಂಸ್ಥೆಯು ಸೇವೆಗಾಗಿ ಗುರುತಿಸಲ್ಪಡುತ್ತದೆ. ಸೇವೆಯಿಂದ ಸಿಗುವಂತಹ ಸಂತೋಷ ಬೇರೆಲ್ಲೂ ಸಿಗುವುದಿಲ್ಲ."

ಶುಭಕೋರಿದ ರೊ. ಬಿ. ರಾಜಾರಾಮ್ ಭಟ್




ಶುಭಾಶಂಸನೆಗೈದ
ರೊ. ಜ್ಞಾನವಸಂತ ಶೆಟ್ಟಿ




ಪ್ರಾಸ್ತಾವನೆಗೈದ
ರೊ. ಸುರೇಶ ಬೇಳೂರು




"ಸೇವೆಯಿಂದ ಸಾಮಾಜಿಕ ಹೊಣೆಗಾರಿಕೆ ಬೆಳೆಯುತ್ತದೆ" ಕುಮಾರಿ ಅನುಪಮಾ ಶೆಟ್ಟಿ




ಐಸಿರಿಯ ಕಾರ್ಯವೈಖರಿಯನ್ನು ಮೆಚ್ಚಿ ಮಾತನಾಡಿದ ರೊ. ಅಮಿತ್ ಅರವಿಂದ್




ಆಯೋಜನೆಯ ಹೆಜ್ಜೆಗಳ ಮೆಲುಕು ಹಾಕಿದ ರೊ. ಸಂದೀಪ್ ಕುಮಾರ್




ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದ ರೊ. ಅನಿಲ್ ಕುಮಾರ್

## ಬೌದ್ಧಿಕ ಸಿರಿ

**ಕನಸುಗಳನ್ನೂ ಕದಿಯುವರು ! ಎಚ್ಚರಿಕೆ.**

ಮೊಂಟಿ ಒಬ್ಬ ಮನೆಗೆಲಸದವರ ಮಗ. ಶಾಲೆಯಲ್ಲಿ ಒಂದು ದಿನ ಅವನ ತರಗತಿಯ ಟೀಚರ್ ಎಲ್ಲಾ ವಿದ್ಯಾರ್ಥಿಗಳಿಗೂ ತಮ್ಮ ಭವಿಷ್ಯದ ಕನಸುಗಳ ಬಗ್ಗೆ ಪ್ರಬಂಧ ಬರೆಯಲು ಹೇಳಿದರು.

ಮೊಂಟಿಯೂ ಪ್ರಬಂಧ ಬರೆದನು. ಅತ್ಯಂತ ಸ್ಪಷ್ಟವಾದ ಕಲ್ಪನೆಗಳಿರುವ ಏಳು ಪುಟಗಳ ಪ್ರಬಂಧವದು.

ಅದರಲ್ಲಿ ಆತ, ತನಗೆ 200 ಎಕರೆ ವಿಸ್ತೀರ್ಣದ ಕುದುರೆ ಲಾಯ, ಅದರಲ್ಲಿ ನೂರಾರು ಉತ್ತಮ ತಳಿಯ ಕುದುರೆಗಳು, ಇದೆಲ್ಲದರ ಉಸ್ತುವಾರಿ ನೋಡುಕೊಳ್ಳುವವರಿಗೆ ಉಳಿದುಕೊಳ್ಳಲು ವಸತಿಗೃಹ, ತನಗೆ ವಾಸಿಸಲು 4,000 ಚದರಡಿಯ ಸುಂದರ ಮನೆ..... ಹೀಗೆ ಸ್ಫುಟವಾದ ಕನಸುಗಳನ್ನೊಳಗೊಂಡ ಪ್ರಬಂಧ ಮಂಡಿಸಿದ.

ಇದನ್ನು ಓದಿದ ಟೀಚರ್, ಸಿಟ್ಟಿನಿಂದ ಇದು ವಾಸ್ತವಕ್ಕೆ ದೂರವಾದ, ಅಸಾಧ್ಯ ಕನಸು ಎಂದು ಹೇಳಿ "ಎಫ್" ಗ್ರೇಡ್ ನೀಡಿದರು.

"ಎಫ್" ಗ್ರೇಡ್ ಪಡೆದು ನೊಂದ ಮೊಂಟಿಗೆ ಶಿಕ್ಷಕಿಯು ಸಮಾಧಾನ ಪಡಿಸಿ, "ನಿನಗೆ ಇನ್ನೊಂದು ಅವಕಾಶ ನೀಡುತ್ತೇನೆ. ಇನ್ನೆರಡು ದಿನಗಳಲ್ಲಿ ಈ ಪ್ರಬಂಧವನ್ನು ನಿನ್ನ ವಾಸ್ತವಿಕ ಪರಿಸ್ಥಿತಿಗೆ ಅನುಗುಣವಾಗಿ ಬದಲಾಯಿಸಿಕೊಂಡು ಬಾ" ಎಂದರು.

ಆದರೆ ಮೊಂಟಿಯು ಎಷ್ಟೇ ಪ್ರಯತ್ನಿಸಿದರೂ, ಇಡೀ ಪ್ರಬಂಧದ ಒಂದೂ ಶಬ್ದವನ್ನು ಬದಲಾಯಿಸಲು ಈತನಿಗೆ ಸಾಧ್ಯವಾಗಲಿಲ್ಲ. ಮೊದಲಿದ್ದ ಪ್ರಬಂಧವನ್ನೇ ಪುನರ್ ಮಂಡಿಸಿದ. ಟೀಚರ್ "ಎಫ್" ಗ್ರೇಡ್ ನಲ್ಲೆ ಮುಂದುವರಿಸುವುದಾಗಿ ಹೇಳಿದಾಗ ನಿಮ್ಮ "ಎಫ್" ನಿಮಗಿರಲಿ, ನನ್ನ ಕನಸು ನನಗಿರಲಿ ಎಂದು ತನ್ನ ನಿರ್ಧಾರಕ್ಕೇ ಬದ್ಧನಾದ.

ಹಲವಾರು ವರ್ಷಗಳ ಬಳಿಕ ಅದೇ ಟೀಚರ್ ಮೊಂಟಿಯ ಕುದುರೆ ಲಾಯಕ್ಕೆ ತನ್ನ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ, ಆ ಕುದುರೆಲಾಯದಲ್ಲೇ ಈ ಘಟನೆಯನ್ನು ಹೇಳಿ ಕಣ್ಣೀರಿಡುತ್ತಾ, ನಾನು ಅದೆಷ್ಟೋ ವಿದ್ಯಾರ್ಥಿಗಳ ಕನಸುಗಳನ್ನು ಕದ್ದಿದ್ದೇನೆ. ಆದರೆ ಮೊಂಟಿ ಮಾತ್ರ ತನ್ನ ಕನಸನ್ನು ಬಿಟ್ಟು ಕೊಡದೇ, ಅದನ್ನು ನನಸಾಗಿಸಿಯೇ ಬಿಟ್ಟ ಎಂದು ಆನಂದಭಾಷ್ಪ ಸುರಿಸಿದರು.

## ಶಿಕ್ಷಕರ ದಿನಾಚರಣೆ







**ಮಾಹಿತಿ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಾರ್ಪಣೆ**

















**DG ಯವರಿಂದ ಗೌರವಿಸಲ್ಪಟ್ಟ ತಮಗೆ ಅಭಿನಂದನೆಗಳು**

(ಮತ್ತಷ್ಟು ವಿವರಗಳು ಮುಂದಿನ ಸಂಚಿಕೆಯಲ್ಲಿ)



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 9ನೇ ವಾರದ ಸಭೆ 02/09/2025ರಂದು RCC ಕಾರ್ಯಾಲಯದಲ್ಲಿ ನಡೆಯಿತು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಕೊರಳ ಲಾಂಛನ ತೊಡಿಸಿದರು. ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಎ. ಗಣೇಶ ಸರ್ ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು.

ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಕಳೆದ ವಾರದ ವರದಿಯನ್ನು ಮಂಡಿಸಿದರು. ರೊ. ಸುನಿಲ್ ಅವರು ಜಿಲ್ಲಾ ಅವಾರ್ಡ್ ಕಾರ್ಯಕ್ರಮದ ಬಗ್ಗೆ ಮಾತನಾಡಿ ಐಸಿರಿಗೆ ದೊರಕಿರುವ 12 ಪ್ರಶಸ್ತಿಗಳನ್ನು ಉಲ್ಲೇಖಿಸಿ ಈ ಯಶಸ್ಸಿಗೆ ರೋಟರಿ ಐಸಿರಿಯ ಸರ್ವ ಸದಸ್ಯರನ್ನು ಅಭಿನಂದಿಸಿದರು.

ರೊ. ಎ. ಗಣೇಶ್ ರವರು District membership seminar ನ ಅನುಭವಗಳನ್ನು ಹಂಚಿಕೊಂಡರು. ಅಲ್ಲದೆ ಕಳೆದ ಆಗಸ್ಟ್ ತಿಂಗಳ ಆಯವ್ಯಯ ಪಟ್ಟಿಯನ್ನು ಮಂಡಿಸಿದರು.

ರೊ ಮಂಜುನಾಥ್ ಉಪಾಧ್ಯ ಜಿಲ್ಲಾ membership seminar ನ ಅನುಭವ ಹಂಚಿಕೊಂಡರು. ರೊ ಗುರುಪ್ರಸಾದ್ ಕಾಮತ್ ಹಾಗೂ ರೊ ಸ್ಮಿತಾ ಕಾಮತ್ ಅವರು membership seminar ನಲ್ಲಿ ಭಾಷಣಕಾರರು ಹೇಳಿದ ವಿಷಯಗಳನ್ನು ಹಂಚಿಕೊಂಡರು.

ರೊ. ಸಂದೀಪ್ ಕುಮಾರ್ interact assembly ಯ ಪೂರ್ಣ ವಿವರಣೆ ಸಭೆಗೆ ತಿಳಿಸಿದಿರು. ವಾರದ ಬುಲೆಟಿನ್ ಐಶ್ವರ್ಯವನ್ನು ರೊ AG ಅಮಿತ್ ಅರವಿಂದ ಬಿಡುಗಡೆಗೊಳಿಸಿದರು ಹಾಗೂ ಇಂಟ್ರಾಕ್ ಅಸೆಂಬ್ಲಿಯ ತಯಾರಿಯ ಮಾರ್ಗದರ್ಶನ ನೀಡಿದರು.

ರೊ. ಸುರೇಶ್ ಬೇಲೂರು ಜಿಲ್ಲಾ ಇಂಟ್ರಾಕ್ಟ್ ಚೇರ್ಮನ್ ಇವರು ಕಾರ್ಯಕ್ರಮದ ಬಗ್ಗೆ ಸಮಲೋಚಿಸಿದರು. ಜೊತೆಗೆ ರೊ.ರಾಜೇಶ.ಡಿ.ಶೆಣೈ ಇವರಿಗೆ ಇಂಟ್ರಾಕ್ ಅಸೆಂಬ್ಲಿಯ ಆಮಂತ್ರಣ ಪತ್ರ ನೀಡಿದರು.

ರೊ. ಸುರೇಶ್ ಬೇಳೂರುರವರು ಜಿಲ್ಲಾ ಇಂಟರಾಕ್ಟ್ ಅಸೆಂಬ್ಲಿಗೆ ರೂ.25,000/– ದೇಣಿಗೆ ನೀಡಿದರು. ನಿಕಟಪೂರ್ವ ಅಧ್ಯಕ್ಷರಾದ ರೊ ಸುನಿಲ್ ಕುಮಾರ್ ಮಾತನಾಡಿ ಇಂಟ್ರಾಕ್ಟ್ ಅಸೆಂಬ್ಲಿಯ ರಿಜಿಸ್ಟ್ರೇಷನ್ ಪೂರ್ವ ತಯಾರಿಯ ಬಗ್ಗೆ ವಿವರಿಸಿದರು. ನಿಯೋಜಿತ ಅಧ್ಯಕ್ಷರಾದ ರೊ.ಸಂದೀಪ್ ಕುಮಾರ್ ಮಾತನಾಡಿ ಇಂಟ್ರಾಕ್ಟ್ ಅಸೆಂಬ್ಲಿಯ ಸಂಪೂರ್ಣ ಮಾಹಿತಿ ನೀಡಿದರು.

ರೊ. ಸ್ಮಿತಾ ಜಿ, ಕಾಮತ ಇಂಟ್ರಾಕ್ಟ್ ಅಸೆಂಬ್ಲಿಯ ಅಜೆಂಡಾ ಸಭೆಗೆ ತಿಳಿಸಿದರು. ಸದಸ್ಯರ ಮಾತಲ್ಲಿ ರೊ. ಮಂಜುನಾಥ ಉಪಾಧ್ಯ, ರೊ. ಗುರುಪ್ರಸಾದ ಕಾಮತ್ ಅಭಿಪ್ರಾಯ ವ್ಯಕ್ತಪಡಿಸಿದರು.

ರೊ. ಎ. ಗಣೇಶ್ ಇಂಟ್ರಾಕ್ ಅಸೆಂಬ್ಲಿಯ ಬಜೆಟ್ ವಿವರಿಸಿದರು. ಐಸಿರಿ ಅಧ್ಯಕ್ಷರಾದ ರೊ. ಅನಿಲ ಕುಮಾರ ಐಸಿರಿ ತಂಡಕ್ಕೆ ಸದಾ ಜೊತೆಗೂಡಿ ಸೇವೆ ಮಾಡುದಕ್ಕೆ ಪ್ರಶಂಸೆ ವ್ಯಕ್ತ ಪಡಿಸಿದರು. ಹಾಗೂ ಇಂಟ್ರಾಕ್ ಅಸೆಂಬ್ಲಿಯ ಕಾರ್ಯಕ್ರಮಕ್ಕೆ ಎಲ್ಲರ ಹಾಜರಾತಿಯನ್ನು ಕೋರಿದರು.

ಮಾಸ್ಟರ್ ಆಕರ್ಷ lucky Rotarian ಆಯ್ಕೆ ನಡೆಸಿ ರೊ. ಗುರುಪ್ರಸಾದ ಕಾಮತ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಗೊಂಡರು. ಜೊತೆಕಾರ್ಯದರ್ಶಿ ವಂದನಾರ್ಪಣೆಗೈದರು.

ಕೊರಳ ಲಾಂಛನ ತೆಗೆದ ನಂತರ ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 9ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ಒಂಭತ್ತನೇ ಆವೃತ್ತಿಯನ್ನು ನಮ್ಮ ರೋಟರಿ ಜಿಲ್ಲಾ ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ 02/09/2025ರಂದು ಬಿಡುಗಡೆ ಗೊಳಿಸಿದರು. ಇಂಟರಾಕ್ಟ್ ಜಿಲ್ಲಾ ಸಭಾಪತಿ ರೊ. ಸುರೇಶ ಬೇಳೂರು ಉಪಸ್ಥಿತರಿದ್ದರು.



ರೋಟರಿ ಐಸಿರಿಯ ಒಂಭತ್ತನೇ ವಾರದ ಸಭೆಯಲ್ಲಿ ಈ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ಮಾಸ್ಟರ್ ಆಕರ್ಷ ನಡೆಸಿದರು. ರೊ. ಗುರುಪ್ರಸಾದ್ ಕಾಮತ್ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.



ರೋಟರಿ ಐಸಿರಿ, ಸಮುದಾಯದಳ ಐಸಿರಿ ವತಿಯಿಂದ ಶಿಕ್ಷಕರ ದಿನಾಚರಣೆ ಪ್ರಯುಕ್ತ ಸ್ಥಳೀಯ ಅಂಗನವಾಡಿ ಶಿಕ್ಷಕಿಯರಿಗೆ ಗೌರವಾರ್ಪಣೆ ಸಲ್ಲಿಸಿ ಮಕ್ಕಳಿಗೆ ಸಿಹಿತಿಂಡಿ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ರೋಟರಿ ಐಸಿರಿ ವೃತ್ತಿಪರ ನಿರ್ದೇಶಕ ರೊ. ಕೆ.ಪ್ರಭಾಕರ ಶೆಟ್ಟಿ, ಆರ್.ಸಿ.ಸಿ.ಐಸಿರಿ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ, ಆರ್.ಸಿ.ಸಿ. ನಿಕಟಪೂರ್ವ ಅಧ್ಯಕ್ಷ ಸತೀಶ್, ಸದಸ್ಯರಾದ ಶ್ರೀಮತಿ ವಿನಂತಿ, ಶ್ರೀ ಗಣೇಶ ಹೆರ್ಗ ಉಪಸ್ಥಿತರಿದ್ದರು.